**ಎರಡನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉಡುಪಿ.**

**ಸೆಷನ್ಸ್ ಕೇಸ್ ನಂಬ್ರಃ  31/2015**

ಇವರೊಳಗೆಃ

ಫಿರ್ಯಾದಿದಾರರು — ಪೋಲಿಸ್ ಉಪ ನಿರೀಕ್ಷಕರು,
ಉಡುಪಿ ನಗರ ಪೋಲಿಸ್ ಠಾಣೆ.

- ಮತ್ತು -

ಆರೋಪಿತರು — 1. ಶಬ್ಬೀರ್
2. ಹಬೀಬ್
3. ಇರ್ಷಾದ್
4. ರಿಜ್ವಾನ್

| | |
|---|---|
| 2 ನೇ ಆರೋಪಿಯ ಹೆಸರು | : ಹಬೀಬ್ |
| ತಂದೆಯ ಹೆಸರು | : ಬಿ.ಅಹಮ್ಮದ್ |
| ಪ್ರಾಯ | : 43 ವರ್ಷ |
| ಉದ್ಯೋಗ | : ಖಾಸಗಿ |
| ವಾಸ ಸ್ಥಳ | : ಚೊಂಬುಗುಡ್ಡೆ ಮಸೀದಿ ಹತ್ತಿರ, ಬಿ.ಕೆ.ಹೌಸ್, ಪಮ್ಮನ್ನೂರು, ಮಂಗಳೂರು. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ-313 ರ ರೀತ್ಯಾ ಮಾಡುವ ಆರೋಪಿಯ ವಿಚಾರಣೆ :**

ಪ್ರಶ್ನೆಃ 1 ಅಭಿಯೋಜನೆ ಪರ ವಿಚಾರಣೆ ಮಾಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ 2 ಅಸಾ.1 ಸುದರ್ಶನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 27.08.2024 ರಂದು ಪೋಲಿಸರು ಅವರನ್ನು ಠಾಣೆಗೆ ಕರೆಸಿ ಚಾಸಾ10 ಮತ್ತು 11 ರವರು ಕೃಷ್ಣಾಪುರದಲ್ಲಿ ಕಾರನ್ನು ಪತ್ತೆ ಹಚ್ಚಿ ಚಾಸಾ13 ರವರ ಮುಂದೆ ಹಾಜರು ಪಡಿಸಿದಾಗ, ಚಾಸಾ13 ಕಾರನ್ನು ಅವರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಪಂಚನಾಮೆ ಬರೆದು ಸಹಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 3 ಅಸಾ.2 ಪುಟ್ಟರಾಜು, ಪಿ.ಎಸ್.ಐ. ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 27-05-2014 ರಂದು ರಾತ್ರಿ 8 ಗಂಟೆಯಿಂದ ಮರುದಿನ ಬೆಳಿಗ್ಗೆ 8 ಗಂಟೆ ಯವರೆಗೆ ಕರ್ತವ್ಯದಲ್ಲಿದ್ದಾಗ ಮಧ್ಯರಾತ್ರಿ 1-25 ಗಂಟೆಗೆ ಕಪ್ಪು ಬಣ್ಣದ ಎಸ್ಟೀಮ್ ಕಾರಿನಲ್ಲಿ ಹಸುಗಳನ್ನು ಕದ್ದು ಒಯ್ಯಲು ಪ್ರಯತ್ನಿಸಿ ತಪ್ಪಿಸಿಕೊಂಡು ಹೋಗುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಸದ್ರಿ ಮಾಹಿತಿಯನ್ನು ಲಾಗ್ ಪುಸ್ತಕದಲ್ಲಿ ನಮೂದು ಮಾಡಿ ನಿಸ್ತಂತು ಮುಖಾಂತರ ಮಾಹಿತಿಯನ್ನು ರವಾನಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 4 ಅಸಾ.3 ಕೆ.ಪ್ರಕಾಶ್, ನಿವೃತ್ತ ಪಿ.ಎಸ್.ಐ. ರವರು ತಮ್ಮ ಸಾಕ್ಷ್ಯದಲ್ಲಿ, ಪ್ರಕರಣಕ್ಕೆ ಸಂಬಂಧಿಸಿದ ಕಾರನ್ನು ಪತ್ತೆ ಹಚ್ಚಲು ತನಿಖಾಧಿಕಾರಿಯ ಸೂಚನೆ ಪ್ರಕಾರ ಕಾರ್ಯ ದಲ್ಲಿದ್ದಾಗ ಸದ್ರಿ ಕಾರು ಕೃಷ್ಣಾಪುರದಲ್ಲಿರುವ ಬಗ್ಗೆ ಮಾಹಿತಿ ಬಂದಿದ್ದು, ಆ ಪ್ರಕಾರ ವಾಹನ ಕೃಷ್ಣಾಪುರದ ಮಠದ ಹತ್ತಿರ ಸಿಕ್ಕಿರುತ್ತದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 5 ಅಸಾ.3 ಮುಂದುವರಿದು, ವಾಹನದವರು ಯಾರೂ ಇಲ್ಲದ ಕಾರಣ ಮೆಕ್ಯಾನಿಕ್ ಮೂಲಕ ಚಾಲನೆ ಮಾಡಿಕೊಂಡು ದಿನಾಂಕಃ27-08-2014 ರಂದು ಮಧ್ಯಾಹ್ನ 2-45 ರ ಸಮಯದಲ್ಲಿ ತನಿಖಾಧಿಕಾರಿ ಸಮಕ್ಷಮ ಹಾಜರುಪಡಿಸಿದ್ದು ಅವರು ನಿಪಿ-1 ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 6 ಅಸಾ.4 ವಿಶ್ವನಾಥ, ಎಚ್.ಸಿ.1125 ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 27-05-2014 ರಂದು ಅವರನ್ನು ಮತ್ತು ಚಾಸಾ6 ರವರನ್ನು ರಾತ್ರಿ ಗಸ್ತು ಕೆಲಸಕ್ಕೆ ನೇಮಿಸಿದ್ದು, ಗಸ್ತು ಕರ್ತವ್ಯದಲ್ಲಿದ್ದಾಗ ರಾತ್ರಿ 1-25 ರ ಸಮಯದಲ್ಲಿ ಎಸ್.ಪಿ. ಕಚೇರಿಯ ನಿಸ್ತಂತು ಕೊಠಡಿಯಿಂದ ಎಸ್ಟೀಮ್ ಕಾರು ನಂ.ಕೆಎ-19-ಎನ್-8448 ರಲ್ಲಿ ಅಕ್ರಮವಾಗಿ ಜಾನುವಾರುಗಳನ್ನು ಸಾಗಾಟ ಮಾಡುತ್ತಿದ್ದಾರೆ

ಎಂದು ಮಾಹಿತಿ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 7 ಅಸಾ.4 ಮುಂದುವರಿದು, ಉಡುಪಿಯ ಡಯಾನಾ ಟಾಕೀಸ್ ಬಳಿ ಗಸ್ತಿನಲ್ಲಿದ್ದಾಗ ರಾತ್ರಿ 1-45 ಕ್ಕೆ ಡಯಾನಾ ಕ್ರಾಸ್ ಬಳಿ ಒಂದು ವಾಹನ ಬಂದಿದ್ದು, ಅದನ್ನು ಗುರುತಿಸಿ ನಿಲ್ಲಿಸಲು ಸೂಚಿಸಿದಾಗ ವಾಹನದಲ್ಲಿದ್ದವರು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ವಾಹನ ನಿಲ್ಲಿಸದೇ ವಾಹನವನ್ನು ನಮ್ಮ ಮೇಲೆ ಹರಿಯ ಬಿಟ್ಟಿರುತ್ತಾರೆ, ಆಗ ನಾವು ಪಕ್ಕಕ್ಕೆ ಸರಿದು ತಪ್ಪಿಸಿಕೊಂಡಿದ್ದೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 8 ಅಸಾ.4 ರವರು ಮುಂದುವರಿದು, ಕಾರಿನಲ್ಲಿ ಎರಡು ಮೂರು ಜನ ಇದ್ದು, ಅವರನ್ನು ಟಾರ್ಚ್ ಲೈಟ್ ಮತ್ತು ಬೀದಿ ದೀಪದ ಸಹಾಯದಿಂದ ನೋಡಿರುತ್ತೇವೆ ಮತ್ತು ಅವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿ ನಿಮ್ಮನ್ನು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 9 ಅಸಾ.4 ಮುಂದುವರಿದು, ದಿನಾಂಕ 28-05-2014 ರಂದು ಬೆಳಿಗ್ಗೆ 11 ಗಂಟೆಗೆ ತಕ್ಷೀರು ಸ್ಥಳಕ್ಕೆ ತನಿಖಾಧಿಕಾರಿ ಭೇಟಿ ಕೊಟ್ಟು ಪಂಚರ ಸಮಕ್ಷಮ ನಿಪಿ-4 ರಂತೆ ಮಹಜರು ಮಾಡಿರುತ್ತಾರೆ ಮತ್ತು ದಿನಾಂಕ 27-10-2014 ರಂದು ಮೂರೂ ಜನ ಆರೋಪಿತರನ್ನು ಠಾಣೆಯಲ್ಲಿ ನೋಡಿ ಗುರುತಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 10 ಅಸಾ.5 ರಮೇಶ್ ದೇವಾಡಿಗ, ಎಚ್.ಸಿ-2060 ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28-05-2014 ರಂದು ಬೆಳಿಗ್ಗೆ 5 ಗಂಟೆಗೆ ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ1 ಕೊಟ್ಟ ದೂರನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 11 ಅಸಾ.6 ರಮೇಶ್, ಗೃಹರಕ್ಷಕ ಇವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು ಹತ್ತು ವರ್ಷಗಳ ಹಿಂದೆ ಅವರು ಮತ್ತು ಚಾಸಾ1 ರಾತ್ರಿ 10 ಗಂಟೆಗೆ ಉಡುಪಿಯ ಡಯಾನಾ ಟಾಕೀಸ್ ಬಳಿ ಗಸ್ತಿನಲ್ಲಿದ್ದಾಗ ಎಸ್.ಪಿ. ಕಚೇರಿಯಿಂದ ನಿಸ್ತಂತು ಸಂದೇಶದ ಮೂಲಕ ಒಂದು ವಾಹನದಲ್ಲಿ ದನಗಳನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 12 ಅಸಾ.6 ಮುಂದುವರಿದು, ರಾತ್ರಿ 1 ಗಂಟೆ ಸುಮಾರಿಗೆ ಬಂದ ವಾಹನವನ್ನು ದಾರಿ ದೀಪದ ಬೆಳಕಿನಿಂದ ನೋಡಿದಾಗ ವಾಹನದಲ್ಲಿ ಸುಮಾರು ನಾಲ್ಕು ಜನರು ಇದ್ದು, ದನ ಇರುವುದು ಕಂಡುಬಂದಿದ್ದು, ವಾಹನವನ್ನು ನಿಲ್ಲಿಸಲು ಸೂಚಿಸಿದಾಗ ವಾಹನವನ್ನು ನಮ್ಮ ಮೇಲೆ ಹಾಯಿಸಲು ಬಂದಿದ್ದು, ನಾವು ಹಾರಿ ತಪ್ಪಿಸಿ ಕೊಂಡೆವು ಮತ್ತು ಆರೋಪಿತರಾದ ನಿಮ್ಮನ್ನು ನೋಡಿ ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 13 ಅಸಾ.7 ಚೇತನ ಶೆಟ್ಟಿ ಇವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು 11 ವರ್ಷಗಳ ಹಿಂದೆ ವ್ಯಾಪಾರ ಮುಗಿಸಿಕೊಂಡು ರಾತ್ರಿ 11-30 ರ ಸಮಯದಲ್ಲಿ ಬೈಕ್ ನಲ್ಲಿ ಮನೆಗೆ ಹೋಗುತ್ತಿದ್ದಾಗ ವೇಣುಗೋಪಾಲ ದೇವಸ್ಥಾನದ ಬಳಿ ಒಂದು ಎಸ್ಟೀಮ್ ಕಪ್ಪು ಬಣ್ಣದ ಕಾರು ಇದ್ದು, ಅದರ ಬಳಿ ಒಂದು ಹಸು ಮತ್ತು ಕರು ಇತ್ತು, ಸ್ಥಳದಲ್ಲಿ ಇಬ್ಬರು ವ್ಯಕ್ತಿಗಳು ಕರುವನ್ನು ಕಾರಿನ ಒಳಗೆ ಹಾಕಿ, ಹಸುವನ್ನು ಹಾಕಲು ಪ್ರಯತ್ನಿಸುತ್ತಿದ್ದರು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 14 ಅಸಾ.7 ಮುಂದುವರಿದು, ಅವರು ಬೈಕಿನ ಹೆಡ್ ಲೈಟನ್ನು ಆ ಕಡೆ ತಿರುಗಿಸಿ ಹಾರ್ನ್ ಮಾಡಿದಾಗ ಸದ್ರಿ ವ್ಯಕ್ತಿಗಳು ಹಸುವನ್ನು ಬಿಟ್ಟು ಕಾರಿನಲ್ಲಿ ಪರಾರಿ ಯಾಗಿರುತ್ತಾರೆ ಮತ್ತು ಕಾರಿನ ಕೊನೆಯ ಸಂಖ್ಯೆ-8448 ಆಗಿತ್ತು, ಅವರು ವಾಹನವನ್ನು ಹಿಂಬಾಲಿಸಿಕೊಂಡು ಮಣಿಪಾಲ ಸಿಂಡಿಕೇಟ್ ಸರ್ಕಲ್ ಬಳಿ ಹೋದಾಗ ಸದ್ರಿ ವ್ಯಕ್ತಿಗಳು ತಪ್ಪಿಸಿಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ: 15 ಅಸಾ.7 ಮುಂದುವರಿದು, ತಕ್ಷಣ ಅವರು ಎಸ್.ಪಿ. ಕಚೇರಿಗೆ ಮಾಹಿತಿ ನೀಡಿರುತ್ತೇನೆ, ನಂತರ ಸದ್ರಿ ವಾಹನ ಬೀಡಿನಗುಡ್ಡೆ ಮುಖಾಂತರ ಡಯಾನಾ ಸರ್ಕಲ್ ಬಳಿ ಹೋಯಿತು ಎಂದು ಗೊತ್ತಾಯಿತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ: 16 ಅಸಾ.8 ಮಧು ಟಿ.ಎಸ್., ಪೋಲಿಸ್ ನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ, ಪ್ರಕರಣದ ಮುಂದಿನ ತನಿಖೆ ವಹಿಸಿಕೊಂಡು ಚಾಸಾ1 ತೋರಿಸಿದ ಡಯಾನಾ ಟಾಕೀಸ್ ಬಳಿ ನಿಪಿ-4 ರಂತೆ ಸ್ಥಳ ಪಂಚನಾಮೆ ಮಾಡಿ ಚಾಸಾ6 ರವರ ಹೇಳಿಕೆ ಪಡೆದು ಕೊಂಡಿದ್ದೇನೆ ಮತ್ತು ಕಾರಿನ ಮಾಹಿತಿ ಪಡೆಯಲು ಆರ್.ಟಿ.ಓ. ಮಂಗಳೂರು ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ: 17 ಅಸಾ.8 ಮುಂದುವರಿದು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದು ಮತ್ತು ದಾಖಲೆ ಗಳನ್ನು ಸಂಗ್ರಹಿಸಿ ಮೇಲ್ನೋಟಕ್ಕೆ ಆರೋಪ ಸಾಬೀತಾದ ಕಾರಣ ನಿಮ್ಮ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ: 18 ನೀವು ಏನಾದರು ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ: 19 ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು.)

Sd/-

ದಿನಾಂಕಃ 19.02.2026

ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.